742(350) ಶ್ರೀ ಹಾಲಪ್ಪ ಹೆಚ್ (ಹೊಸನಗರ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಶೆಟ್ಟಿಹಳ್ಳಿ ಅಭಯಾರಣ್ಯ ಪ್ರದೇಶದಲ್ಲಿ ಬಯೋಸ್ಪಿಯರ್ ಯೋಜನೆ ಅನ್ವಯ ರೈತರ ಜಮೀನನ್ನು ಅರಣ್ಯ ಇಲಾಖೆಯವರು ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಗುರುಪಾದಪ್ಪ ನಾಗಮಾರ ಪಳ್ಳಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಶಿವಮೊಗ್ಗ ತಾಲ್ಲೂಕು ಶೆಟ್ಟಿಹಳ್ಳಿ ಅಭಯಾರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಖಾಸಗಿ ಜಮೀನನ್ನು ಅವರ ಸ್ವಇಚ್ಛೆಯಿಂದ ಸರ್ಕಾರಕ್ಕೆ ನೀಡಲು ಬಯಸಿದಲ್ಲಿ ಅದನ್ನು ಖರೀದಿಸುವ ವಿಷಯ ಇಲಾಖಾ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಆ) ಭಾರತ ಸರ್ಕಾರವು 2002–2016ರ ಅವಧಿಗೆ ರಾಷ್ಟ್ರೀಯ ವನ್ಯಜೀವಿ ಕ್ರಿಯಾ ಯೋಜನೆಯೊಂದನ್ನು ಹೊರಡಿಸಿದೆ ಈ ಯೋಜನೆಯಡಿಯಲ್ಲಿ ರಕ್ಷಿತ ಪ್ರದೇಶಗಳ ಅಭಿವೃದ್ಧಿ ಬಲಪಡಿಸುವ ನಿಟ್ಟಿನಲ್ಲಿ ಸ್ವಇಚ್ಛೆಯಿಂದ ವನ್ಯಧಾಮಗಳಿಂದ ಸ್ಥಳಾಂತರ ಹೊಂದಲು ಹಾಗೂ ಪುನರ್ವಸತಿ ಬಯಸುವ ಖಾಸಗೀ ಭೂ ಮಾಲೀಕರ ರಾಜ್ಯ ಸರ್ಕಾರಗಳ ಮುಖಾಂತರ ಅನುಷ್ಠಾನಗೊಳಿಸುವ ಕಾರ್ಯಕ್ರಮ ಸದರಿ ಯೋಜನೆಯ ಒಂದು ಅಂಶವಾಗಿದೆ.

ಈ ಹಿನ್ನೆಲೆಯಲ್ಲಿ ಅಭಯಾರಣ್ಯದ ಪರಮಿತಿಯೊಳಗೆ ಬರುವ ಖಾಸಗಿ ಜಮೀನನ್ನು ಅವರ ಸ್ವಇಚ್ಛೆಯಿಂದ ಸರ್ಕಾರಕ್ಕೆ ನೀಡುದಾದಲ್ಲಿ ಅದನ್ನು ಖರೀದಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಬೇಕಾಗಿರುತ್ತದೆ. ಜಮೀನಿನ ಖರೀದಿಗೆ ದೊಡ್ಡ ಮೊತ್ತದ ಅನುದಾನ ಬೇಕಾಗಿರುತ್ತದೆ. ಇದಕ್ಕೆ ಭಾರತ ಸರ್ಕಾರವು ನೀಡುವ ಆರ್ಥಿಕ ಯೋಜನೆ ಅಥವಾ ಅರಣ್ಯ ಪ್ರದೇಶದ ಉಪಯೋಗಿ ಸಂಸ್ಥೆಯವರು ನೀಡುವ ಹಣದಿಂದ ಅನುವುಮಾಡಿಕೊಳ್ಳಬೇಕಾಗುತ್ತದೆ.

ಈ ಉದ್ದೇಶಿತ ಯೋಜನೆಯ ಅನುಷ್ಠಾನಕ್ಕಾಗಿ ಯಾವುದೇ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಇನ್ನೂ ಗುರುತಿಸಿರುವುದಿಲ್ಲ ಅಥವಾ ಗುರಿ ನಿಗದಿಪಡಿಸಿರುವುದಿಲ್ಲ. ಯೋಜನೆಯನ್ನು ಅಂತಿಮಗೊಳಿಸುವ ಮೊದಲು ಆಳವಾದ ಪರಿಶೀಲನೆ ಹಾಗೂ ಚರ್ಚೆಯ ಅವಶ್ಯಕತೆ ಇದೆ.

ಈ ವಿಷಯದಲ್ಲಿ ಯಾವುದೇ ಅಂತಿಮ ತೀರ್ಮಾನ ಕೈಗೊಳ್ಳುವ ಮೊದಲು ಜನಪ್ರತಿನಿಧಿಗಳೊಂದಿಗೆ ಮತ್ತು ಸಂಬಂಧಪಟ್ಟ ರೈತರೊಂದಿಗೆ ಚರ್ಚಿಸಲಾಗುವುದು.

744(976) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಸರ್ಕಾರ ಘೋಷಣೆ ಮಾಡಿದೆ ಹಾಗೂ ಅವು ಯಾವುವು (ತಾಲ್ಲೂಕುವಾರು ವಿವರ ನೀಡುವುದು) ;

ಆ) ಎಷ್ಟು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲು ಬಾಕಿ ಇದೆ (ತಾಲ್ಲೂಕುಗಳ ಹೆಸರು ನೀಡುವುದು);

ಇ) ಇದಕ್ಕಾಗಿ ಸರ್ಕಾರ ನಿಗದಿ ಮಾಡಿರುವ ಹಣ ಹಾಗೂ ಧಾನ್ಯದ ಪ್ರಮಾಣವೆಷ್ಟು (ವಿವರ ನೀಡುವುದು);

ಈ) ಇದುವರೆಗೂ ಬಿಡುಗಡೆ ಮಾಡಿದ ಹಾಗೂ ವಿತರಣೆ ಮಾಡಿದ ಪ್ರಮಾಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಉ) 1.4.2004 ರಿಂದ 31.12.04 ರವರೆಗೆ ಕೇಂದ್ರ ಸರ್ಕಾರ ನೀಡಿರುವ ಹಣ ಹಾಗೂ ಧಾನ್ಯದ ವಿವರ ನೀಡುವುದು ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 2004–05ನೇ ಸಾಲಿನಲ್ಲಿ ಈವರೆಗೆ 80 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ. ತಾಲ್ಲೂಕುವಾರು ವಿವರವನ್ನು ಲಗತ್ತಿಸಿದೆ.

ಆ) ಸಧ್ಯಕ್ಕೆ ಇಲ್ಲ.

ಇ) ಕೇಂದ್ರಸರ್ಕಾರಕ್ಕೆ ಪರಿಹಾರಕ್ಕಾಗಿ ರೂ. 114771.24 ಲಕ್ಷಗಳು ಹಾಗೂ 4.53 ಮೆ.ಟನ್ ಆಹಾರಧಾನ್ಯ ಬಿಡುಗಡೆಗೆ ಮೆಮೊರಾಂಡಂ ಸಲ್ಲಿಸಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಈ) ಪರಿಹಾರ ಕಾರ್ಯಗಳ ವೆಚ್ಚಕ್ಕಾಗಿ ರಾಜ್ಯ ಸರ್ಕಾರವು ಒಟ್ಟು ರೂ. 13974.02 ಲಕ್ಷಗಳನ್ನು ಬಿಡುಗಡೆ ಮಾಡಿದ ವಿವರ ಈ ಕೆಳಕಂಡಂತಿದೆ.

		(ರೂ. ಲಕ್ಷಗಳಲ್ಲಿ)
1.	ಕುಡಿಯುವ ನೀರು	3709.00
2.	ಉದ್ಯೋಗಸೃಜನೆಗಾಗಿ	3530.00
3.	ಕೃಷಿ ಪರಿಕರಗಳಿಗೆ	6735.00
	ಒಟ್ಟು	**13974.00**

ಉ) 1.4.04 ರಿಂದ 31.12.04 ರವರೆಗೆ ಕೇಂದ್ರ ಸರ್ಕಾರದಿಂದ

ಸಿ.ಆರ್.ಎಫ್ ನಿಧಿಯಡಿಯಲ್ಲಿ ರೂ.67.98 ಕೋಟಿ

ಎನ್.ಸಿ.ಸಿ.ಎಫ್ ನಿಧಿಯಡಿಯಲ್ಲಿ ರೂ. 14.48 ಕೋಟಿ

ಒಟ್ಟು **ರೂ. 82.46 ಕೋಟಿ**

ಹಾಗೂ 2,39,620 ಮೆ.ಟನ್ ಆಹಾರಧಾನ್ಯಗಳು ಬಿಡುಗಡೆ ಮಾಡಲಾಗಿದೆ.

List of taluks declared as drought during 2004-05

Sl. No.	District	Taluk	Sl No.	District	Taluk
I	Bangalore (Rural)	1. Devanahalli	XII	Gadag	42. Gadag
					43. Mundargi
					44. Ron
					45. Shirahatti
II	Bagalkote	2. Bagalkote	XII	Gulbarga	46. Afzalpur
		3. Badami			47. Aland
		4. Bilgi			48 Chincholi
		5. Hungund			49. Chitapura
		6. Jamakandi			50. Gulbarga
					51. Jewargi
					52. Sedam
					53. Shahapur
					54. Shorapur
					55. Yadgir
III	Belgum	7. Bailhongal	XIV	Hassan	56. Arasikere
		8. Belgaum			57. Hassan
		9. Chikkodi			58. Holenarasipura
		10. Gokak			

	11. Ramadurga		
	12. Hukkeri		
	13. Soundatti		
IV Bellary	14. Bellary	XV Haveri	59. Byadgi
	15. H.B. Halli		60. Herekerur
	16. Hadagali		61. Hanagal
	17. Siruguppa		62. Haveri
			63. Ranebennur
			64. Savanur
			65. Shigaon
V Bidar	18. Aurad	XVI Kolar	66. Bagepalli
	19. Bidar		67. Chikballapura
	20. Bhalki		68. Gowribidanur
	21. Humnabad		
VI Bijapur	23. Bijapur	XVII Koppal	69. Kushtagi
	24. B.Bagewadi		70. Yelburga
	25. Indi		
	26. Muddebihal		
	27. Sindagi		
VII C.R.Nagar	28. Yelandur	XVIII Mandya	71. Krishnarajpet
VIII Chikm-	29. Kadur	XIX Mysore	72. Heggada-
agalur	30. Tarikere		devanakote
			73. Periyapatna
IX chitradurga	31. Challakere	XX Raichur	74. Deodurga
	32. Chitradurga		75. Lingasugur
	33. Hiriyur		76. Manvi
	34. Molkalmuru		77. Raichur
X Davanagere	35. Davanagere	XXI Tumkur	78. Pavagada
	36. Jagalur		79. Sira
			80. Tiptur
XI Dharwad	37. Dharwad		
	38. Hubli		
	39. Kalghatgi		
	40. Kundgol		
	41. Navalgund		

Annexure - 2

	(Rs. in Lakhs)
Animal Husbandry and Fisheries	962.00
Agriculture	10883.00
Horticulture	410.00
Relief Employment	50301.60
Health	275.00
Rural water Supply	9425.00
Urban Water Supply	6766.86
Minor Irrigation	13817.00
Special Nutrition	3030.78
Major and Medium Irrigation	500.00
Energy	7500.00
Co.operation	10900.00
TOTAL	**114771.24**

745(977) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಬಾರ್ಡ್‌ನಿಂದ ಲೋಕೋಪಯೋಗಿ ರಸ್ತೆಗೆ ವಿಧಾನಸಭಾ ಕ್ಷೇತ್ರವಾರು ಬಿಡುಗಡೆ ಮಾಡಿದ ಹಣವೆಷ್ಟು ? 2004 ಏಪ್ರಿಲ್ ನಿಂದ 31 ಡಿಸೆಂಬರ್ 2004 ರವರೆಗಿನ ವಿವರ ನೀಡುವುದು;

ಆ) ಹಣ ಬಿಡುಗಡೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಈ ತಾರತಮ್ಯ ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೊಪಯೋಗಿ ಮತ್ತು ಇಂಧನ ಸಚಿವರು):

ಅ) ನಬಾರ್ಡ್ ಸಾಲಸಹಾಯದ ಆರ್.ಐ.ಡಿ.ಎಫ್. ಯೋಜನೆಯಡಿ 2004–05ನೇ ವರ್ಷದಲ್ಲಿ ನಬಾರ್ಡ್‌ನಿಂದ ಸಾಲ ಪಡೆಯಲು ಸರ್ಕಾರವು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ 275.00 ಕೋಟಿ ರೂ. ಮೊತ್ತದ 457 ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಪ್ರಸ್ತಾವನೆಯನ್ನು ನಬಾರ್ಡ್ ಅನುಮೋದನೆಗೆ ಕಳುಹಿಸಿದೆ. ನಿಧಾನಸಭಾ ಕ್ಷೇತ್ರವಾರು ಸಂಕ್ಷಿಪ್ತ ವಿವರವನ್ನು ಅನುಬಂಧದಲ್ಲಿ ನೀಡಿದೆ.

ಆ) 2004–05ನೇ ವರ್ಷದಲ್ಲಿ ಪ್ರಸ್ತಾವಿಸಿರುವ ಹೊಸ ಕಾಮಗಾರಿಗಳಿಗೆ ಸರ್ಕಾರದಿಂದ ಹಣ ಬಿಡುಗಡೆ ಆಗಿರುವುದಿಲ್ಲ. ಪ್ರಸ್ತಾವನೆಗಳನ್ನು ನಬಾರ್ಡ್ ಅನುಮೋದನೆಗೆ ಕಳುಹಿಸಲಾಗಿದ್ದು ನಬಾರ್ಡ್ ಅನುಮೋದನೆಯನ್ನು ಹಂತಹಂತವಾಗಿ ಕಾಮಗಾರಿವಾರು ನೀಡುತ್ತದೆ.

ಇ) ನಬಾರ್ಡ್ ತನ್ನ ನಿಯಮಾವಳಿಗೆ ಒಪ್ಪುವಂತಹ ಕಾಮಗಾರಿಗಳಿಗೆ ಅನುಮೋದನೆ ನೀಡುತ್ತದೆ. ಆದ್ದರಿಂದ ನಬಾರ್ಡ್‌ನಿಂದ ಅನುಮೋದನೆ ಬಂದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.